ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರ ಖಜಾನೆಯನ್ನು ತಮಗಿಷ್ಟ ಬಂದವರಿಗೆ ಇಷ್ಟಬಂದ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ಪ್ರತಿಭಟಿಸಿ ನಮ್ಮ ಪಕ್ಷದ ಸದಸ್ಯ ರೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು)

ಮೊದಲನೆಯ ಖಂಡ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವವೇನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಂವಂಗೊಳಿಸುವ ಸೂತ್ರ ಸಂಹಿತೆಯು ವಿಧೇಯಕದ ಭಾಗವಾಗಿರುತ್ತದೆ''

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಮೊದಲನೆಯ ಖಂಡ (ದೀರ್ಘ ಶೀರ್ಷಿಕೆ) ಪೀಠಿಕಾ ಭಾಗ ಹಾಗೂ ಅಧಿನಿಯಮ ಗೊಳಿಸಂವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

ಅಂಗೀಕಾರ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು),—ಮಾನ್ಯ ಅಧ್ಯಕ್ಷರೇ ''ಕರ್ನಾಟಕದ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ ೧೯೮೬ ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು,—ಪ್ರಸ್ತಾವವೇನೆಂದರೆ ''ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ ೧೯೮೬ ಅನ್ನು ಅಂಗೀಕರಿಸುವುದು''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು ಮತ್ತು ವಿಧೇಯಕವನ್ನು ಅನುಮೋದಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಕಂದಾಯ ಸಚಿವರು ಹಾಜರಿರಲು ಅನಾನುಕೂಲವಾಗಿದೆ ಎಂದು ತಿಳಿಸಿದ್ದಾರೆ. ಆದ್ದರಿಂದ ಕರ್ನಾಟಕ ಭೂ ಸಂಧಾರಣಾ ವಿಧೇಯಕವನ್ನು ಮುಂದಕ್ಕೆ ಹಾಕ ಬೇಕೆಂದು ಕೇಳಿಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ :—ಸುಳ್ಯ ಕ್ಷೇತ್ರದ ಶಾಸಕರಿಗೆ ಪೋಲೀಸ್ ಅಧಿಕಾರಿಗಳು ಅವಮಾನ ಮಾಡಿರುವುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಸುಳ್ಯ ಶಾಸಕ ಶ್ರೀ ಕುಶಾಲ್ ಅವರ ಮೇಲೆ ದಿನಾಂಕ ೨೪-೯-೮೫ ಸುಳ್ಯ ಕ್ಷೇತ್ರದ ಹಿರಿಯ ಪೋಲೀಸ್ ಅಧಿಕಾರಿಗಳು ಅವಮಾನಕರವಾಗಿ ವರ್ತಿಸಿದರು ಎಂಬ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ದಿನಾಂಕ ೨೪-೯-೮೫ರಂದು ಶ್ರೀ ಕುಶಾಲ್ ಬೈರ. ಎಂ. ಎಲ್. ಎ. ಮತ್ತು ಹನ್ನೆರಡು ಜನ ಇತರರು ಸುಳ್ಯದಲ್ಲಿ ಸಬ್ ಇನ್ಸ್‌ಪೆಕ್ಟರು ವಿರುದ್ಧ ವೈರವಣಿಗೆ ತೆಗೆದು ಅವಹೇಳನಕರವಾದ ಘೋಷಣೆಗಳನ್ನು ಕೂಗಿ ಅವರ ಚಾರಿತ್ರ್ಯ ವಧೆಯಾಗುವ ರೀತಿಯಲ್ಲಿ ಮಾತನಾಡಿದರು ಎಂಬ ಆಪಾದನೆಯ ಮೇಲೆ ಸಬ್ ಇನ್ಸ್‌ಪೆಕ್ಟರ್ ಠಾಣೆಗೆ ದೂರು ನೀಡಿದರು. ಸರ್ಕಲ್ ಇನ್ಸ್‌ಪೆಕ್ಟರ್ ಈ ದೂರಿನ ಮೇಲೆ ಕ್ರೈಂ. ನಂ. ೧೪೪/೮೫ ಕಲಂ ೧೪೩, ೧೪೭, ೩೫೩, ೫೦೬ ಇತ್ಯಾದಿ ಐ. ಪಿ. ಸಿ. ಪ್ರಕಾರ ಮೊಕದ್ದಮೆ ದಾಖಲಾ ಮಾಡಿಕೊಂಡರು. ಎಂ, ಎಲ್. ಎ. ರವರನ್ನೊಳಗೊಂಡು ಒಂಭತ್ತು ಜನರನ್ನು ದಸ್ತಗಿರಿ ಮಾಡಿ ಜಮೀನಿನ ಮೇಲೆ ಬಿಟ್ಟರು, ಈ ಕೇಸಿನ ಸಂದರ್ಭದಲ್ಲಿ ಸ್ಥಳೀಯ ಪೋಲೀಸ್ ಅಧಿಕಾರಿಗಳು ಸರಿಯಾಗಿ ನಡೆದುಕೊಳ್ಳಲಿಲ್ಲ. ಎಂಬುದು ಕಂಡು ಬಂದಿದ್ದರಿಂದ ಪುತ್ತೂರಿನ ಡಿ. ಎಸ್. ಪಿ. ಮತ್ತು ಸುಳ್ಯದ ಸಬ್ ಇನ್ಸ್‌ಪೆಕ್ಟರ್‌ರವರನ್ನು ವರ್ಗ ಮಾಡಲಾಗಿದೆ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಜನವರಿ ೮೬ ರಲ್ಲಿ ಬಿಡುಗಡೆಯಾಗಿರುವರು